# ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತ್ವರಿತ ವಿಶೇಷ ನ್ಯಾಯಾಲಯ–I, ಚಾಮರಾಜನಗರ

## SC.No.130/2023

ಚಾಸಾ:05/ಪ್ರಾಸಾ:07

ದಿನಾಂಕ **20.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಶಿವೇಗೌಡ** |
| **ತಂದೆ** / ಗಂಡನ ಹೆಸರು | : | ಶ್ರೀ ಬೆಟ್ಟೇಗೌಡ |
| ವಯಸ್ಸು | : | 52 ವರ್ಷ |
| ವೃತ್ತಿ | : | ವ್ಯವಸಾಯ |
| ವಿಳಾಸ | : | ಸಂಗೇಗೌಡನಹುಂಡಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ. |

**ಮುಖ್ಯ ವಿಚಾರಣೆ – ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ1 ರಿಂದ 3 ರವರ ಪರಿಚಯ ಇದೆ. ಈ ಪ್ರಕರಣದ ಆರೋಪಿಗಳ ಪರಿಚಯ ಇರುವುದಿಲ್ಲ (ಆರೋಪಿಗಳು ಗೈರು ಹಾಜರಿದ್ದು ಹಾಜರಾತಿಗೆ ವಿನಾಯತಿ ಕೋರಿ ಅರ್ಜಿ ಸಲ್ಲಿಸಲಾಗಿದೆ, ಆರೋಪಿಗಳ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ಮಾನ್ಯ ವಕೀಲರು ತಿಳಿಸಿರುತ್ತಾರೆ).

02. ಆರೋಪಿಗಳು ಹಾಗೂ ಚಾಸಾಃ1 ರಿಂದ 3 ರವರ ನಡುವೆ ಗಲಾಟೆಯಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅವರ ನಡುವೆ ಹಣಕಾಸಿನ ವ್ಯವಹಾರ ಆಗಿರುವ ಬಗ್ಗೆ ನನಗೆ ತಿಳಿದಿಲ್ಲ. ಆರೋಪಿ 1 ಮತ್ತು 3ರವರು ಚಾಸಾಃ1 ರಿಂದ 3ರವರ ಜೊತೆ ಸಾಲದ ಹಣದ ವಿಷಯವಾಗಿ ಜಗಳ ತೆಗೆದು ಹಲ್ಲೆ ನಡೆಸಿರುವ ಬಗ್ಗೆ ನನಗೆ ತಿಳಿದಿಲ್ಲ. ಸಾಕ್ಷಿ ಮುದ್ದೆಮಾಲುಃ6ರ ಗುರುತನ್ನು

ನಿರಾಕರಿಸಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಿಸಿ, ಹೇಳಿಕೆ ದಾಖಲಿಸಿಕೊಂಡಿರುವುದಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮನವಿ ಮಾಡಿರುತ್ತಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

**03.** ದಿನಾಂಕ 24.03.2019ರಂದು ದಾಖಲಿಸಲಾಗಿರುವ ಸಾಕ್ಷಿಯ ಹೇಳಿಕೆಯನ್ನು ಓದಿ ವಿವರಿಸಲಾಯಿತು. ಸಾಕ್ಷಿ ತಮ್ಮ ಹೇಳಿಕೆಯಲ್ಲಿ "ದಿನಾಂಕ 23.03.2019 -------------- ಮತ್ತೆ ನೋಡಿದರೆ ಗುರುತಿಸುತ್ತೇನೆ" ಎಂಬ ಭಾಗವನ್ನು ನಿರಾಕರಿಸಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ನಿಪಿಃ**15** ಎಂದು ಗುರುತಿಸಲಾಯಿತು.

**04.** ದಿನಾಂಕ 23.03.2019ರಂದು ರಾತ್ರಿ 7.45 ಗಂಟೆಯ ಸಮಯದಲ್ಲಿ ಆರೋಪಿ 1 ಮತ್ತು 2ರವರು ಚಾಸಾಃ2ರವರ ಜೊತೆ ಜಗಳ ತೆಗೆದು, ಅವಾಚ್ಯ ಶಬ್ಧಗಳಿಂದ ನಿಂದಿಸಿ ಸಾಲದ ಹಣವನ್ನು ನಾನು ಹೇಗೆ ತೀರಿಸಲಿ, ನಿನಗೆ ಸರಿಯಾಗಿ ಮಾಡುತ್ತೇನೆ ಎಂದು ಹೇಳುತ್ತಾ, ಆರೋಪಿ 1 ಮತ್ತು 2ರವರು ಚಾಸಾಃ2ರವರನ್ನು ಕೆಳಗೆ ಬೀಳಿಸಿಕೊಂಡಾಗ 1ನೇ ಆರೋಪಿಯು ಮುದ್ದೆಮಾಲುಃ6ರಿಂದ ಚಾಸಾಃ2ರವರ ಕತ್ತಿನ ಬಲಭಾಗಕ್ಕೆ ಚುಚ್ಚಿರುವುದಲ್ಲದೆ ನಿನ್ನನ್ನುಸಾಯಿಸದೇ ಬಿಡುವುದಿಲ್ಲ ಎಂದು ಹೇಳುತ್ತಿದ್ದು, ಅದೇ ಚಾಕುವಿನಿಂದ ಚಾಸಾಃ2ರವರ ಬಲಕೆನ್ನೆಯ ಬಳಿ ಕುಯ್ದು, ಎಡಗೈಗೆ

ಚಾಕುವಿನಿಂದ ಚುಚ್ಚಿ ರಕ್ತಗಾಯ ಪಡಿಸಿರುವುದಲ್ಲದೆ 2ನೇ ಆರೋಪಿಯು ಚಾಸಾಃ2ರವರ ಬೆನ್ನು ಮತ್ತು ಮೈಕೈಗೆ ಗುದ್ದಿ, ಕಾಲಿನಿಂದ ಒದ್ದು ತುಳಿದಾಗ ನಾನು ಹಾಗೂ ಚಾಸಾಃ4ರವರು ಜಗಳ ಬಿಡಿಸಿದೆವು, ಚಾಸಾಃ2ರವರ ಕತ್ತಿನ ಬಲಭಾಗ, ಬಲಗೆನ್ನೆ ಹಾಗೂ ಎಡಗೈಗೆ ಏಟಾಗಿ ರಕ್ತ ಸುರಿಯುತ್ತಿದ್ದು ಚಾಸಾಃ1ರವರು ಆಂಬುಲೆನ್ಸ್‌ಗೆ ಫೋನ್ ಮಾಡಿ ಚಾಸಾಃ1 ಮತ್ತು 3ರವರು ಚಾಸಾಃ2ರವನ್ನು ಗುಂಡ್ಲುಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನನಗೆ ತಿಳಿಯಿತು ಎಂದು ನಾನು ಹೇಳಿಕೆ ನೀಡಿರುವುದಿಲ್ಲ. ಚಾಸಾ2ರವರು ತಾನು ಕೆಲಸ ಮಾಡುತ್ತಿದ್ದ ಗುಡ್ಡಪ್ಪ ಕ್ಯಾಂಟೀನ್ ನ ರಾಮು ರವರಿಗೆ ತನ್ನ ಸ್ನೇಹಿತರ ಹಾಗೂ ಪರಿಚಿತರ ಮೂಲಕ ಸುಮಾರು ರೂ.5,00,000/–ಗಳನ್ನು ಸಾಲವಾಗಿ ಕೊಡಿಸಿದ್ದು ರಾಮು ಪ್ರತಿ ತಿಂಗಳು ರೂ.50,000/– ಹಣದ ಕಂತನ್ನು ಕಟ್ಟುವಂತೆ ಮಾತುಕತೆಯಾಗಿದ್ದು ಅದರಂತೆ ರಾಮು ಸಾಲದ ಕಂತುಗಳನ್ನು ಕಟ್ಟುತ್ತಿದ್ದು, ಕೆಲವು ದಿನಗಳಿಂದ ಚಾಸಾಃ2 ತನ್ನ ಮನೆಯಲ್ಲಿ ತೊಂದರೆಯಾದ ಕಾರಣ ಕ್ಯಾಂಟೀನ್ ಕೆಲಸಕ್ಕೆ ಹೋಗಿಲ್ಲದ ಕಾರಣ ಆರೋಪಿ 1 ನಮ್ಮ ಊರಿಗೆ ಬಂದು, ಚಾಸಾಃ2ರವರನ್ನು ಕುರಿತು ನೀನು ಹೀಗೆ ಮಾಡಿದರೆ ನಾನು ಸಾಲವನ್ನು ಹೇಗೆ ತೀರಿಸಲಿ ಎಂದು ಹೇಳಿ, ತನಗೆ ಸಾಲ ಕೊಡಿಸಿರುವ ಬಗ್ಗೆ ಪ್ರಚಾರ ಮಾಡಿ ಅವಮಾನಿಸುತ್ತಿದ್ದಾನೆ ಎಂಬ ದ್ವೇಷದಿಂದ ಆಗಾಗ ಗಲಾಟೆಯಾಗಿದ್ದು ಒಬ್ಬರಿಗೊಬ್ಬರಿಗೆ ಮಾತಾಗಿದ್ದು ಅವರೇ ಸಮಾಧಾನ ಮಾಡಿಕೊಂಡು ಸುಮ್ಮನಾಗಿದ್ದರು ಎಂದು ಹೇಳಿಕೆ ನೀಡಿರುವುದಿಲ್ಲ. ದಿನಾಂಕ 23.03.2019ರಂದು ಸಾಯಂಕಾಲ 6.00 ಗಂಟೆಯ ಸಮಯದಲ್ಲಿ

ಆರೋಪಿ 1 ಮತ್ತು 2ರವರು ಚಾಸಾಃ2ರವರ ಜೊತೆ ಜಗಳ ಕಾಯ್ದು ಹಣಕಾಸಿನ ವ್ಯವಹಾರದಲ್ಲಿ ಚಾಸಾಃ2ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಹಲ್ಲೆ ಮಾಡಿರುವುದಾಗಿ ನಾನು ಆರೋಪಿಗಳನ್ನು ಹಾಗೂ ಮುದ್ದೆಮಾಲುಃ6ನ್ನು ಹಾಗೂ ಆರೋಪಿಗಳು ಬಂದಿದ್ದ ಬೈಕ್ ಅನ್ನು ದೀಪದ ಬೆಳಕಿನಲ್ಲಿನೋಡಿದ್ದು ಮತ್ತೆ ನೋಡಿದರೆ ಗುರುತಿಸುವುದಾಗಿ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನಿಪಿಃ15ರಂತೆ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ.

**05.** ನನಗೆ ಈ ಪ್ರಕರಣದ ಎಲ್ಲಾ ಮಾಹಿತಿ ಇದ್ದರೂ ಘಟನೆಯ ಪ್ರತ್ಯಕ್ಷ ಸಾಕ್ಷಿಯಾಗಿದ್ದರೂ ನಿಪಿಃ15ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿಃ ಶ್ರೀ ಜಿ ಎಸ್ ಕೆ ವಕೀಲರಿಂದ**

**06.** ಆರೋಪಿ ಪರ ವಕೀಲರು ಹಾಜರಿದ್ದು ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಲಾಗಿ ಕೇಳಿ ಸರಿಯಿದೆ ಎಂದು ಒಪ್ಪಿರುತ್ತಾರೆ.

**(ಎಸ್.ಜೆ. ಕೃಷ್ಣ)**
ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ತ್ವರಿತ ವಿಶೇಷ ನ್ಯಾಯಾಲಯ-I, ಚಾಮರಾಜನಗರ.

SJ KRISHNA
Digitally signed by S J KRISHNA
Date: 2025.01.28 17:08:43 +0530